ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 62/2020**

ಚಾಸಾ-5 ಪ್ರಾಸಾ-5

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 04-07-2025

| | | |
|---|---|---|
| ಹೆಸರು | : | ಬೀರಣ್ಣ |
| ತಂದೆಯ ಹೆಸರು | : | ಮಹಾದೇವಪ್ಪ ಪೂಜಾರಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಟೈಲರಿಂಗ |
| ವಾಸಸ್ಥಳ | : | ಬಿಲ್ವಾಡ (ಕೆ) |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ಚಾಸಾ 1, 4 ಮತ್ತು 6 ರವರ ಪರಿಚಯ ಇರುತ್ತದೆ.

ನಮ್ಮೂರಿನ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಯಾರೋ ಚಪ್ಪಲಿ ಹಾರ ಹಾಕಿರುವ ಕುರಿತು ವಿಚಾರಣೆ ಮಾಡಲು ಹಾಲುಮತದ ಸಮುದಾಯದ ಮುಖಂಡರನ್ನು ಕರೆಸಿದ್ದು ಆ ಸಮಯದಲ್ಲಿ ನಾನು ಹಾಜರಾಗಿದ್ದು ಇರುತ್ತದೆ. ಸದರಿ ಪ್ರಕರಣ ಕುರಿತು ಪೋಲಿಸರು ಹೇಳಿಕೆ ನೀಡಿಲು ಹೇಳಿರುತ್ತಾರೆ. ಆಗ ನಾನು ನನಗೆ ಏನು ಗೊತ್ತಿಲ್ಲ ಎಂದು ನುಡಿದಿರುತ್ತೇನೆ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸ.ಸ.ಅ. ರವರಿಂದ

ದಿಃ 17-08-2019 ರಂದು ರಾತ್ರಿ 8-00 ಗಂಟೆಗೆ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಯಾರೋ ಅವಮಾನ ಮಾಡಿದ್ದಾರೆ ಎಂದು ಚಾಸಾ 1, 4 ಮತ್ತು ನಾನು ಪೋಲಿಸ

ಠಾಣೆಗೆ ಹೋಗಿರುತ್ತೇವೆ ಎಂದರೆ ಸಾಕ್ಷಿ ನಾನು ಮರುದಿನ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯೂ ತಾನೇ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಎರಡು ಚಪ್ಪಲಿಗಳು ಮತ್ತು ಎರಡು ಶಾಲಾ ಮಕ್ಕಳ ಬೂಟುಗಳನ್ನು ಹಾಕಿರುವುದಾಗಿ ನನ್ನ ಸಮಕ್ಷಮ ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿತನೇ ಸಂಗೊಳ್ಳಿ ರಾಯಣ್ಣ ರವರ ಭಾವಚಿತ್ರಕ್ಕೆ ಅವಮಾನ ಮಾಡಿರುತ್ತಾನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯೂ ನಿರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ವಕೀಲರಿಂದಃ-

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ - **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ